ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**ಸಿ. ಸಿ. ನಂ.801/2024**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ನಾಗರಾಜ ತಳವಾರ | ಪಿಡಬ್ಲ್ಯೂ | 02 |
| ತಂದೆ:ಗಂಡನ ಹೆಸರು | : | ಹನಮಂತಪ್ಪ | ಸಿಡಬ್ಲ್ಯೂ | 02 |
| ವಯಸ್ಸು | : | 49 ವರ್ಷ | | |
| ಉದ್ಯೋಗ | : | ಕೂಲಿ | | |
| ವಾಸಸ್ಥಳ | : | ಮಂತಗಿ | | |

ದಿನಾಂಕ **17.01.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-3 ,5 ರವರ ಪರಿಚಯ ಇದೆ. ದಿನಾಂಕ: 10.07.2023 ರಂದು ಬೆಳಿಗ್ಗೆ 8.30 ಗಂಟೆ ಮಂತಗಿಯಿಂದ ಹಾನಗಲ್ ಗೆ ಒಂದು ಬಸ್ ಬರುತ್ತದೆ ಅದರಲ್ಲಿ ನಾನು ಇದ್ದೆ. ಹಾನಗಲ್ ಗೆ ಬಸ್ ಬಂದು ಹಳೇ ಬಸ್ ನಿಲ್ದಾಣ ಹತ್ತಿರ ಪಾದಗಟ್ಟಿ ಹತ್ತಿರ ನಿಂತಿತು. ಎಲ್ಲರೂ ಇಳಿದರು. ಆಗ ಚಾಸಾ-4 ಮುಂದೆ ಹೊರಟಿದ್ದರು. ಬಸ್ ಮುಂದಕ್ಕೆ ಹೋಗಿ ಅವರಿಗೆ ಡಿಕ್ಕಿ ಹೊಡೆಯಿತು. ಅವರು ಕೆಳಗೆ ಬಿದ್ದರು. ಬಸ್ ಗಾಲು ಬಲಗಾಲಿಗೆ ಹತ್ತಿತ್ತು. ನಾವು ಕೂಗಿದಾಗ ಬಸ್ ಚಾಲಕ ಹಿಂದಕ್ಕೆ ತೆಗೆದುಕೊಂಡನು. ಅವರನ್ನು ಎಬ್ಬಿಸಿ ಬಾಜು ಹಾಕಿ ಆ್ಯಂಬುಲೆನ್ಸ್ ಗೆ ಪೊನ್ ಮಾಡಿ ಅವರಿಗೆ ಹತ್ತಿಸಿಕೊಂಡು ಹೋದೆವು. ಮಾರನೇ ದಿನ 11 ತಾರೀಖಿಗೆ ಪೋಲಿಸರು ಪಂಚನಾಮೆಗೆ ಕರೆದಿದ್ದರು. ಆಗ ನಾನು ಚಾಸಾ-3,5 ರವರು ಇದ್ದೆವು. ಬಸ್ ಅಲ್ಲೇ ಇತ್ತು. ಚಾಸಾ-5 ರವರು ಜಾಗ ತೋರಿಸಿದರು. ಬಸ್ ಪೊಟೋ ತೆಗೆದರು. ನನ್ನ ಸಹಿ ಪಡೆದರು ಬಸ್ ನಂ. ಕೆಎ. 27 ಎಫ್ 509 ಇತ್ತು. ಪಂಚನಾಮೆ ಅರ್ಧ ತಾಸಿನವರೆಗೆ ನಡೆಯಿತು. ಪಂಚನಾಮೆ ಸಮಯವು ಬೆಳಿಗ್ಗೆ 10.30 ರಿಂದ 12.00 ಗಂಟೆ ಆಗಿರುತ್ತದೆ. ಬಸ್ ನ್ನು ಪೋಲಿಸ್ ಠಾಣೆಗೆ ತೆಗೆದುಕೊಂಡು ಹೋದರು ಸಾಕ್ಷಿ ಪಂಚನಾಮೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅಪಘಾತ ಸ್ಥಳದ ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. 3 ಪೊಟೋಗಳನ್ನು ನಿಪಿ-4 ಎಂದು ಗುರುತಿಸಲಾಯಿತು. ವಾಹನ ಜಪ್ತಿ ಪಂಚನಾಮೆಯನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಚಾಲಕನ ಹೆಸರು ಗೊತ್ತಾಗಲಿಲ್ಲ. ಆತನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಕೆ ವಕೀಲರಿಂದಃ</u>

ನನ್ನದು ಮಂತಗಿ ಗ್ರಾಮ. ಚಾಸಾ-4 ನನ್ನ ಸಂಬಂಧಿಕರಿರುವುದಿಲ್ಲ ನಮ್ಮ ಸಮಾಜದವರು. ನಾನು ಬಸ್ ನ ಬಲಭಾಗದಲ್ಲಿ ಕುಳಿತಿದ್ದೆ. ಯಾವ ಸೀಟಿನಲ್ಲಿ ಕುಳಿತಿದ್ದೆ ನೆನಪಿಲ್ಲ. ಬಸ್ ನಲ್ಲಿ 130-150 ಜನ ಇದ್ದರು ಎಂದರೆ ಸಾಕ್ಷಿ ಅಷ್ಟು ಜನ ಇರಲಿಲ್ಲ ನಾನು ಪ್ರಯಾಣಿಕರನ್ನು ಎಣಿಸಿಲ್ಲ. ಆ ದಿನ ನಾನು ಆ ಬಸ್ ನಲ್ಲಿ ಪ್ರಯಾಣಿಸಿಲ್ಲ ಎಂದರೆ ಸರಿಯಲ್ಲ. ನಾನು ಪ್ರಯಾಣ ಮಾಡಿದ ಬಗ್ಗೆ ಟಿಕೇಟನ್ನು ಹಾಜರುಪಡಿಸಿಲ್ಲ. ಸುಮಾರು 5-6 ಹಳ್ಳಿ ಜನ, ಶಾಲಾ ಮಕ್ಕಳು, ಶಕ್ತಿಯೋಜನೆ ಅಡಿಯಲ್ಲಿ ಮಹಿಳೆಯರು ಹಾನಗಲ್ ಗೆ ಪ್ರತಿಯೊಂದು ಕೆಲಸಕ್ಕೆ ಬೆಳಗಿನ ಬಸ್ ನಲ್ಲಿ ಬರುತ್ತಾರೆ ಎಂದರೆ ಸರಿ. ಘಟನಾ ಸ್ಥಳದ ಚಕಬಂದಿ ಹೇಳಲು ಬರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ವರದಿ ಮಾಹಿತಿ ನೀಡಿಲ್ಲ. ನಾನು 7 ನೇ ತರಗತಿಯವರೆಗೆ ಓದಿದ್ದೇನೆ. ಓದಲು ಬರೆಯಲು ಬರುತ್ತದೆ. ನಾನು ಪೋಲಿಸರು ಕರೆದಾಗ ಹೋಗಿದ್ದೇನೆ ವಯಕ್ತಿಕವಾಗಿ ಯಾವುದೇ ಹೇಳಿಕೆ ಕೊಟ್ಟಿಲ್ಲ. ನನ್ನನ್ನು ಚೌಡಪ್ಪ ರವರು ಕರೆದಿದ್ದರು. 11 ನೇ ತಾರೀಖಿಗೆ ಕರೆದಿದ್ದರು. ಚೌಡಪ್ಪ ಚಾಸಾ-1 ರವರ ಸಂಬಂಧಿಕರಿರುವುದಿಲ್ಲ. ಚೌಡಪ್ಪನ ಪೂರ್ಣ ಹೆಸರು ಚೌಡಪ್ಪ ಬಂಗಾರೆಪ್ಪ ಜಡೆದ ಇವರು ಸಹ ನಮ್ಮ ಊರಿನವರು. ಚಾಸಾ-1 ನನ್ನನ್ನು ಕರೆದಿರುವುದಿಲ್ಲ. ಅವರ ಕರೆದಾಗ ನಾನು ಪಂಚನಾಮೆಗೆ ಬಂದಿರುತ್ತೇನೆ. ಬಸ್ ಯಾವ ದಿಕ್ಕಿಗೆ ಮುಖಮಾಡಿ ನಿಂತಿತ್ತು ಎಂದರೆ ಸಾಕ್ಷಿಯ ಹೊಸ ಬಸ್ ನಿಲ್ದಾಣ ಕಡೆ ಮುಖ ಮಾಡಿ ನಿಂತಿತ್ತು ಎಂದು ನುಡಿಯುತ್ತಾರೆ. ರಸ್ತೆ 40-50 ಅಡಿ ಅಗಲ ಇರಬಹುದು. ಬಸ್ ರಸ್ತೆ ಎಡಭಾಗದಲ್ಲಿ ನಿಂತಿತ್ತು. ಘಟನೆಯಾದಾಗ ನಾನು ಬಸ್ ನ ಎಡಭಾಗದಲ್ಲಿ ಇದ್ದೆ. ಬಸ್ ನ ಉದ್ದ ಮತ್ತು ಎತ್ತರ ಹೇಳಲು ಬರುವುದಿಲ್ಲ. ನಾನು ಬಸ್ ನ ಎಡ ಭಾಗದಲ್ಲಿ ಇದ್ದುದ್ದರಿಂದ ನನಗೆ ಬಲಭಾಗದ ಕಡೆದು ಯಾವುದು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಬಸ್ ಸಾಕ್ಷಿ ಮುಂದುವರೆದು ಅಪಘಾತವು ಎಡಭಾಗದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸ್ಥಳವು ಬಸ್ ನಿಲ್ದಾಣ ಆಗಿದ್ದರಿಂದ, ಜನದಟ್ಟಣೆ ಇದ್ದುದ್ದರಿಂದ ಮಹಿಳೆಯರು ಜಾಸ್ತಿ ಇದ್ದುದ್ದರಿಂದ ನನಗೆ ಏನು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಪೋಲಿಸ್ ಠಾಣೆಯಲ್ಲಿ ಸಾಕಷ್ಟು ಜನ ಇದ್ದರು. ನಾನು ಬಸ್ ನಲ್ಲಿ ಸಹ ಪ್ರಯಾಣ ಮಾಡುತ್ತಿರಲ್ಲಿ ಎಂದರೆ ಸರಿಯಲ್ಲ. ಘಟನಾ ಸ್ಥಳ ಪಂಚನಾಮೆ ಮಾಡುವಾಗ ಭಾಗಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಈ ಘಟನಾ ಪಂಚನಾಮೆಗೂ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಸಹಾಯ ವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**: ಮರುವಿಚಾರಣೆ : ಇಲ್ಲ.**</u>

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್